# ದುರಗಮುರಗಿಯರ ಸಾಂಸ್ಕೃತಿಕ ಬದುಕು: ಆಧುನಿಕತೆಯ ಪ್ರಭಾವ

ಎಸ್.ಡಿ. ಕೆಂಗಲಗುತ್ತಿ

ಸಹಾಯಕ ಪ್ರಾಧ್ಯಾಪಕರು, ಬಸವೇಶ್ವರ ಕಲಾ ಮಹಾವಿದ್ಯಾಲಯ, ಬಾಗಲಕೋಟೆ.

DOI: https://doi.org/10.5281/zenodo.18775224

## ABSTRACT:

ಉತ್ತರ ಕರ್ನಾಟಕದ ಗ್ರಾಮೀಣ ಭಾಗದ ವಿಶಿಷ್ಟ ಅಲೆಮಾರಿ ಸಮುದಾಯವಾದ ದುರಗಮುರಗಿಯರ ಸಾಂಸ್ಕೃತಿಕ ಬದುಕು ಮತ್ತು ಬದಲಾದ ಕಾಲಘಟ್ಟದಲ್ಲಿ ಅವರು ಎದುರಿಸುತ್ತಿರುವ ಸವಾಲುಗಳನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಶಕ್ತಿದೇವತೆಗಳಾದ ದುರ್ಗಮ್ಮ ಮತ್ತು ಮರಗಮ್ಮನ ಆರಾಧಕರಾದ ಇವರು, ಭಿಕ್ಷಾಟನೆಯನ್ನೇ ಮೂಲವೃತ್ತಿಯನ್ನಾಗಿ ಸ್ವೀಕರಿಸಿದವರು. ಬುರುಬುರು ವಾದ್ಯದೊಂದಿಗೆ ಪೋತರಾಜನು ಮಾಡುವ ಭಯಂಕರ ಕುಣಿತ, ಮೈಮೇಲೆ ಮಾಡಿಕೊಳ್ಳುವ ಗಾಯಗಳು ಮತ್ತು ಅವರು ಪಾಲಿಸುವ ಕಟ್ಟುನಿಟ್ಟಾದ ಸಂಪ್ರದಾಯಗಳು ಈ ಸಮುದಾಯದ ಅನನ್ಯತೆಯನ್ನು ಸಾರುತ್ತವೆ. ಆದರೆ ಜಾಗತೀಕರಣ ಹಾಗೂ ಆಧುನಿಕತೆಯ ಪ್ರಭಾವದಿಂದಾಗಿ ಈ ಕಲೆಗೆ ಮನ್ನಣೆ ಕಡಿಮೆಯಾಗುತ್ತಿದ್ದು, ಹೊಟ್ಟೆಪಾಡಿಗಾಗಿ ಕೂಲಿ, ಕಾರ್ಖಾನೆ ಕೆಲಸಗಳಿಗೆ ವಲಸೆ ಹೋಗುವ ಅನಿವಾರ್ಯತೆ ಒದಗಿಬಂದಿದೆ. ಆರ್ಥಿಕ ಸಂಕಷ್ಟ ಮತ್ತು ಬದಲಾದ ಸಾಮಾಜಿಕ ದೃಷ್ಟಿಕೋನದಿಂದಾಗಿ ಈ ಶ್ರೀಮಂತ ಜಾನಪದ ಕಲೆಯು ನೇಪಥ್ಯಕ್ಕೆ ಸರಿಯುತ್ತಿರುವ ಆತಂಕವನ್ನು ಈ ಅಧ್ಯಯನವು ವ್ಯಕ್ತಪಡಿಸುತ್ತದೆ.

## KEYWORDS:

ದುರಗಮುರಗಿಯರು, ಪೋತರಾಜ, ಉಪಸಂಸ್ಕೃತಿ, ಅಲೆಮಾರಿ ಸಮುದಾಯ, ಆಧುನಿಕತೆಯ ಪ್ರಭಾವ.

---

**ಬರ್ರಿಮ್ಮ... ಬರ್ರಿವ್ವಾ...**
**........ ಬರ್ರಿವ್ವಾ.......**
**ನಿಮ್ಮೂರಿಗಿ ಸುಖ... ನಿಮ್ ಕೇರೀಗಿ ಸುಖ....**
**ಆಡೋ ಮಕ್ಕಳಿಗಿ ಸುಖ...... ತೂಗೋ ತೊಟ್ಟಲಿಗಿ ಸುಖ.....**
**ಓಣೀಯೊಳಗ ತಾಯಿ ಬಂದಾಳ..... ಮರಗವ್ವ ಬಂದಾಳ.....**
**ಆಡೋ ಮಕ್ಕಳ, ತೂಗೋ ತೊಟ್ಟಲ ಸುಖ ಆಗಲಿ ರೀ... ರೀ........**
**ಹಾಹಾಹಾಹಾಹ್ಹಾಹ್ಹಾಹ್ಹಾ............. ಹಾಹಾಹಾಹ್ಹಾಹ್ಹಾಹ್ಹಾ.......**

ಎಂದು ಆರ್ಭಟಿಸುತ್ತ 'ಖಡಲ್....... ಖಡಲ್.....' ಎಂದು ಸದ್ದಾಗುವಂತೆ ತನ್ನ ಬರಿಮೈಗೆ ಲಡ್ಡು ಹೊಡೆದುಕೊಳ್ಳುತ್ತ, ಊರು ಊರು ಕೇರಿ ಕೇರಿಗಳನ್ನು ಸುತ್ತಿ, ಶಕ್ತಿದೇವಿಯ ಆರಾಧನೆಯೊಂದಿಗೆ, ಭಿಕ್ಷಾಟನೆಯನ್ನೇ ವೃತ್ತಿಯನ್ನಾಗಿಸಿಕೊಂಡು ಬದುಕುವ ಜನಾಂಗವೇ ದುರಗಮುರಗಿಯರು. ಇಂತಹ ಸಾಂಸ್ಕೃತಿಕ ಬದುಕೊಂದು ಶತಮಾನಗಳಿಂದಲೂ ಒಂದು ಊರಿನ ಭಾಗವಾಗಿಯೇ ಬದುಕಿದ್ದು ಮಾತ್ರ ಈ ನೆಲದ ವೈಶಿಷ್ಟ್ಯ .

"ಎಪ್ಪಾ ಇದ ನಮ್ಮ ಬದುಕ ನೋಡ್ರಿ ಸಾಹೇಬ್ರ. ನಮಗ ಇಬ್ಬರ ತಾಯಂದಿರು, ಒಬ್ಬಳು ದುರ್ಗಮ್ಮ ಇನ್ನೊಬ್ಬಳು ಮರಗಮ್ಮ. ನಾವು ಇಬ್ಬರ ಸೇವೆ ಮಾಡಕೊಂಡ ಬದುಕಬೇಕ ಅಂತ ಅವರ ಅಪ್ಪಣೆ ಆಗೈತಿರಿ. ಊರಾಡಿ ಈ ಅವ್ವಂದಿರ ಗುಡಿ ಹೊತ್ತು, ಬುರುಬುರು ವಾದ್ಯ ಬಾರಿಸುತ್ತ, ಪೋತರಾಜನಾಗಿ ಕುಣಿಯುತ್ತಲೇ ಭಿಕ್ಷೆ ಬೇಡಿಕೊಂಡೇ ನಾವು ಬದುಕಬೇಕೆಂದು ಈ ಅವ್ವ ಹೇಳ್ಯಾಳರಿ. ಈ ಕೆಲಸ ಬಿಟ್ಟರ ನಾವು ರಕ್ತಕಾರಿ ಸಾಯುತ್ತೇವೆ. ನಮ್ಮ ವಂಶ ನಿರ್ವಂಶ ಆಗತೈತಿರಿ. ನಮ್ಮ ಕುಲ ಅಳಿದು ಹೋಗತೈತಿರಿ," ಎಂಬತ್ತರ ವಯೋಮಾನದ ಪೋತರಾಜ ಹನುಮಜ್ಜ ಆಡುವ ಮಾತುಗಳಿವು.

ಮುಂದುವರಿದು, "ಎಪ್ಪಾ ನಮ್ಮ ಅಜ್ಜ ಮುತ್ತಜ್ಜನ ಕಾಲದಿಂದಲೂ ನಾವು ಈ ತಾಯಿನ ನಂಬಿ ಬದುಕಿದವರು. ಪೂಜಾ, ವ್ರತ, ನೇಮ ಮಾಡಕೊಂಡು ಆರಾಧಿಸ್ತಾ ಬಂದೇವಿ. ಈ ತಾಯಿ ನಮ್ಮನ್ನ ಕೈ ಬಿಟ್ಟಿಲ್ಲರಿ. ನಮ್ಮ ಸಾವು-ನೋವು, ಸುಖ-ದುಃಖ ಎಲ್ಲಾ ಅವಳಿಗೆ ಬಿಟ್ಟೀವರಿ. ಈ ಊರಾಗ ನಾವು ಇಪ್ಪತ್ತ ಜನಾ ಗುಡಿಸಲಾ ಹಾಕೊಂಡು ಅದೀವಿರಿ. ನಾಳೆ ನಮಗ ಅನ್ನ ಸಿಗೈತೋ ಬಿಡತೈತೋ ಗೊತ್ತಿಲ್ಲರಿ, ಆದರ ಪೂಜಾ ನೇಮ ನಿತ್ಯ ಕಟ್ಟುನಿಟ್ಟಾಗಿ ನಡಿಯಬೇಕರಿ. ಇದರಿಂದ ಆ ತಾಯಿ ನಮ್ಮನ್ನ ಮತ್ತ ನಮ್ಮ ಕುಲದವರನ್ನು ಉಪವಾಸ ಬೀಳಸಿಲ್ಲರಿ," ಎಂದು ಹನುಮಜ್ಜನೇ ಮುಂದುವರಿದು ಮಾತನಾಡಿದ.

ಒಂದು ಕಾಲಕ್ಕೆ ಇಂತಹ ಸಾಂಸ್ಕೃತಿಕ ಬದುಕೊಂದು ಊರಲ್ಲಿ ಬಂದರೆ ಜಾತಿ, ಮತ, ಪಂಥವೆನ್ನದೆ ಬಹುತೇಕ ಆ ಪರಿಸರದ ಎಲ್ಲ ಜನ ಆ ದೇವಿಯ ಮೇಲಿನ ಶ್ರದ್ಧೆ-ಭಕ್ತಿಯಿಂದಲೇ ದುರಗಮುರಗಿಯರನ್ನು ಗೌರವಿಸುತ್ತಿದ್ದರು. ಊರಿಗೆ ಬಂದಿರುವ ಆಪತ್ತನ್ನು ನಿವಾರಣೆ ಮಾಡುವ ಈ ಮಾರಿದೇವಿಗೆ ಕೊಡಬೇಕಾದ ವಿವಿಧ ಧಾನ್ಯವನ್ನು ಮರದಲ್ಲಿಟ್ಟು, ದಕ್ಷಿಣೆ ಮತ್ತು ನೀರು ಸಮೇತವಾಗಿ ಅರ್ಪಿಸುತ್ತಿದ್ದರು. ಇಂತಹ ಅಪೂರ್ವ ಸಂಸ್ಕೃತಿಯ ಜನಸಮುದಾಯ ನಮ್ಮ ನಾಡಿನ ಹಳ್ಳಿಗಾಡಿನ ಜನಮಾನಸದಲ್ಲಿ ಶಾಶ್ವತವಾಗಿ ನೆಲೆನಿಂತಿರುವುದು ಈಗ ಇತಿಹಾಸ.

**ಸಂಸ್ಕೃತಿ – ದುರಗಮುರಗಿಯರು:**

ಈ ನೆಲೆಯಲ್ಲಿ ಚಿಂತಕ ಎಮರ್ಸನ್ 'ಜೀವನದ ಭಾರವನ್ನು ಹಗುರಮಾಡುವ ಯೋಗವೇ ಸಂಸ್ಕೃತಿ: ಅದೇ ಆತ್ಮ ಸಂಸ್ಕಾರ' ಎಂಬುದಾಗಿ ಅಭಿಪ್ರಾಯ ಪಟ್ಟರೆ, ದೇವುಡು ಅವರು ಸಂಸ್ಕೃತಿಯನ್ನು ವಿಶ್ಲೇಷಿಸುತ್ತ, 'ಮನುಷ್ಯನ ಶಿಕ್ಷಣಾದಿಗಳನ್ನು ಮೀರಿದ ಮನಸ್ಥಿತಿಗೆ, ನಡವಳಿಕೆಗೆ ಒತ್ತು ಕೊಟ್ಟಿದ್ದಾರೆ'. ಹಾಗೆಯೇ 'ಎಲ್ಲ ಸದ್ಗುಣ ಸಂಪತ್ತಿನ ಸಾಮರಸ್ಯವೇ ಸಂಸ್ಕೃತಿ' ಎಂಬುದಾಗಿ ಶಿವಮೂರ್ತಿ ಶಾಸ್ತ್ರಿಗಳು ಅಭಿಪ್ರಾಯ ಪಡುತ್ತಾರೆ. 'ಒಂದು ಸುಂದರ ಜೀವನದ ಭಾವನೆ ಮತ್ತು ಅದಕ್ಕನುಗುಣವಾಗಿ ಮನುಷ್ಯ ಸ್ವಭಾವದ ಸರ್ವತೋಮುಖವಾದ ಗುಣಸಂಪಾದನೆ – ಇದು ಕಾವ್ಯದ ಪ್ರಧಾನ ತತ್ವ. ಸಂಸ್ಕೃತಿಯದೂ ಅದೇ' ಎಂಬುದಾಗಿ ಡಿವಿಜಿ

ಅವರು ಅಭಿಪ್ರಾಯ ಪಡುತ್ತಾರೆ.

ಮುಂದುವರಿದು ಸಂಸ್ಕೃತಿ ಎಂಬುದು 'ಗೌರವಿಸು, ಆರಾಧಿಸು, ಸೇವೆಮಾಡು, ಮೊದಲಾದ ಅರ್ಥವನ್ನು ಕೊಡುತ್ತದೆ. ಒಂದೆಡೆ ದೇವಭಕ್ತಿ ಎಂಬ ಅರ್ಥವನ್ನು ಪಡೆದರೆ, ಇನ್ನೊಂದು ಕಡೆ ಭೂದೇವಿಯ ಆರಾಧನೆ, ಅಂದರೆ ಕೃಷಿ ಎಂಬ ಅರ್ಥವನ್ನು ಪಡೆಯುತ್ತದೆ' ಎಂದು ಡಿವಿಜಿ ಅವರು ಅಭಿಪ್ರಾಯ ಪಡುತ್ತಾರೆ. 'ಸಂಸ್ಕೃತಿ ಎಂಬುದೂ ಕೂಡಾ ಒಂದು ಬಗೆಯ ವ್ಯವಸಾಯವೇ. ಭೂಮಿಯನ್ನು ಉತ್ತು, ಬಿತ್ತಿ, ನೀರು, ಗೊಬ್ಬರ ಹಾಕಿ, ಹಸನು ಮಾಡುವಂತೆ ಮನುಷ್ಯನಲ್ಲಿರುವ ವಿಶೇಷವಾದ ಶಕ್ತಿಗಳು ಮೊಳಕೆಯೊಡೆದು ಬೆಳೆಯುವುದಕ್ಕಾಗಿ ಮಾಡಬೇಕಾದ ಅಂತರಂಗದ ಬೇಸಾಯವೇ ಸಂಸ್ಕೃತಿ'.

'ಸಂಸ್ಕೃತಿ ಎಂಬುದು ಅಂತರಂಗದ ವಿಕಾಸ ನಿಜ. ಆ ವಿಕಾಸಕ್ಕೆ ಕಾರಣವಾದ ಸಾಮಾಜಿಕ ಪರಿಕರಗಳೂ ಹೌದು. ನುಡಿದಂತೆ ನಡೆಯುವುದೇ ಸಂಸ್ಕೃತಿ. ಸಮಾಜದೊಡನೆ ಸಹಬಾಳ್ವೆಯ ಸೌಜನ್ಯದ ಮಾರ್ಗವೇ ಸಂಸ್ಕೃತಿ. ಆತ್ಮಶಿಕ್ಷಣವೇ ಸಂಸ್ಕೃತಿ. ಸಾಹಿತ್ಯಾದಿ ಸರಸ ಕಲೆಗಳೇ ಸಂಸ್ಕೃತಿ.' ಒಟ್ಟಾರೆಯಾಗಿ ಸಂಸ್ಕೃತಿ ಎಂಬುದು ಸಹಸ್ರ ಮುಖಗಳನ್ನು ಹೊಂದಿರುವ ವಿರಾಟ್‌ರೂಪ ಅದರದು. ಇದನ್ನು ಸೂತ್ರ ರೂಪದಲ್ಲಿ ಹಿಡಿದಿಡಲಾಗದು. ನಮ್ಮ ದೈನಂದಿನ ಉಡುಗೆ ತೊಡುಗೆಗಳಲ್ಲಿ, ನಡೆ-ನುಡಿಗಳಲ್ಲಿ ನಮ್ಮ ನಿತ್ಯದ ಕಾರ್ಯ ಚಟುವಟಿಕೆಯ ಒಂದೊಂದು ಅಂಗುಲದಲ್ಲಿಯೂ ಅದರ ಪ್ರಭಾವ ಎದ್ದು ಕಾಣುತ್ತದೆ. ಒಂದರ್ಥದಲ್ಲಿ ಸಂಸ್ಕೃತಿ ಎಂಬುದು ಒಂದು ಜನಸಮುದಾಯದ ಬದುಕಿನ ರೀತಿ-ನೀತಿ, ನಡೆ-ನುಡಿ ಮತ್ತು ಪರಂಪರೆಯ ಸಮುಚ್ಚಯ.

'ಸಂಸ್ಕೃತಿ' ಎನ್ನುವುದು ವ್ಯಕ್ತಿಯ ಅಂತರಂಗದ ಪರಿಕರ ಎಂಬುದಾಗಿ ಪರಿಭಾವಿಸಿದರೂ, ಅದು ಬಹಿರಂಗದಿಂದ ಬೇರೆಯಾಗಿರಲು ಸಾಧ್ಯವಿಲ್ಲ. ಮನುಷ್ಯನ ಅಂತರಂಗವಾಗಲಿ, ಬಹಿರಂಗವಾಗಲಿ, ತನಗೆ ತಾನೇ ಸ್ವತಂತ್ರವಾದ ಘಟಕವಲ್ಲ. ಒಂದು ಇನ್ನೊಂದನ್ನು ಅವಲಂಬಿಸಿಯೇ ಆಕಾರ ಪಡೆಯುತ್ತವೆ. ಈ ನೆಲೆಯಲ್ಲಿ ನಮ್ಮ ನಾಡಿನ ಯಾವುದೇ ಜನಸಮುದಾಯದ ಸಂಸ್ಕೃತಿಯನ್ನು ಅರಿಯಲು ಜನಾಂಗೀಯ ಅಧ್ಯಯನ ತುಂಬಾ ಅಗತ್ಯವಾದುದು. ಜನತೆಯ ಜೀವನ ವಿಧಾನಗಳನ್ನು ಅಧ್ಯಯನ ಮಾಡುವುದು ಎಂದರೆ ಸಂಸ್ಕೃತಿಯನ್ನು ಕುರಿತು ಅಧ್ಯಯನ ಮಾಡಿದಂತೆಯೇ. ಒಂದು ಜನಸಮುದಾಯಕ್ಕೆ ಅವರದೇ ಆದ ವಿಶಿಷ್ಟ 'ಸಂಸ್ಕೃತಿ'ಯೊಂದು ಇದ್ದೇ ಇರುತ್ತದೆ. ಪ್ರಧಾನ ಸಂಸ್ಕೃತಿಯ ಪರಿಧಿಯಲ್ಲಿ ಇಂತಹ ಜನಸಮುದಾಯದ ನೆಲೆಗಳು ಗುರುತಿಸದಿದ್ದರೂ, ಉಪಸಂಸ್ಕೃತಿಗಳಾಗಿ ಈ ವಲಯಗಳು ಪ್ರಾಧಾನ್ಯತೆಯನ್ನು ಪಡೆಯುತ್ತವೆ. ಅಂತಹ ಉಪಸಂಸ್ಕೃತಿಯ ಜನಾಂಗದಲ್ಲಿ ದುರಗಮುರಗಿಯರ ಜನಸಮುದಾಯವೂ ಒಂದು.

ಕರ್ನಾಟಕದಲ್ಲಿ ವಾಸಿಸುವ ಸುಮಾರು ಎಂಭತ್ತಕ್ಕೂ ಹೆಚ್ಚು ಉಪಸಂಸ್ಕೃತಿಯ ಬುಡಕಟ್ಟು ಜನಸಮುದಾಯಗಳಲ್ಲೊಂದಾದ ದುರಗಮುರಗಿಯರು ಅನ್ನ, ನೀರು,

ಅರಿವೆಯನ್ನರಸಿ ಅಲೆಯುತ್ತ ಅಲ್ಲಲ್ಲಿ, ಅಷ್ಟಿಷ್ಟು ಹೊತ್ತು ನೆಲೆಯೂರಿ, ಬದುಕು ಸವೆಯಿಸಿ ನಾಳಿನ ಅನ್ನಕ್ಕಾಗಿ ಮುಂದಿನೂರಿಗೆ ಪ್ರಯಾಣ ಬೆಳೆಸುತ್ತಾರೆ. ಹೀಗೆ ಅನ್ನ, ನೀರು, ಹುಡುಕಿಕೊಂಡು ತಮ್ಮ ಕಲೆಯನ್ನು ಪ್ರದರ್ಶಿಸುತ್ತಾ ದೇವರು, ದೈವಗಳ ಆರಾಧನೆ ಮಾಡುತ್ತ ಭಿಕ್ಷಾಟನೆಯ ವೃತ್ತಿಯನ್ನೇ ಅವಲಂಬಿಸಿ ಬದುಕು ತಳೆದ ಈ ಜನಾಂಗ ಕರ್ನಾಟಕದ ಇತಿಹಾಸದಲ್ಲಿ ವಿಶಿಷ್ಟ ಸಾಂಸ್ಕೃತಿಕ ಪರಂಪರೆಯನ್ನು ಹೊಂದಿದೆ.

ಪ್ರಪಂಚೀಕರಣದ ಇಂದಿನ ಕಾಲಘಟ್ಟದಲ್ಲಿ ಗ್ರಾಮೀಣ ಪರಿಸರದೆಡೆಗೆ ಅದರಲ್ಲೂ ಬಾಗಲಕೋಟೆ ಮತ್ತು ವಿಜಯಪುರ ಜಿಲ್ಲೆಗಳಿಗೆ ವಲಸೆಬಂದು ನೆಲೆ ಕಂಡುಕೊಂಡಿರುವ ಈ ಜನಸಮುದಾಯದ ಸ್ಥಿತಿಗತಿಗಳೇನು? ಅವರ ಸಾಮಾಜಿಕ, ಆರ್ಥಿಕ, ಧಾರ್ಮಿಕ ಬದುಕಿನ ಅವಸ್ಥೆಗಳೇನು? ನಂಬಿಕೊಂಡು ಬಂದ ವೃತ್ತಿ, ನಂಬಿಕೆ, ಸಂಪ್ರದಾಯ ಮತ್ತು ಆಚರಣೆಗಳೇನಾಗಿವೆ ಎಂಬುದನ್ನು ಗುರುತಿಸುವುದೆ ಈ ಲೇಖನದ ಉದ್ದೇಶವಾಗಿದೆ.

ನಾಡಿನ ಸಾಹಿತ್ಯ ಪರಂಪರೆಯಲ್ಲಿ ಶಿಷ್ಟ ಸಾಹಿತ್ಯ ಪರಂಪರೆ, ಅಕ್ಷರಸ್ಥ ಮಧ್ಯಮ ಮತ್ತು ಮೇಲ್ವರ್ಗದವರಾಗಿದ್ದರೆ, ಜನಪದ ಸಾಹಿತ್ಯ ಕೆಳವರ್ಗದವರದ್ದು, ದಲಿತರದ್ದು, ಒಟ್ಟಾರೆ ಎಲ್ಲ ಕೆಳ ಜಾತಿಯ ಶೂದ್ರರದ್ದು. ಮೇಲ್ವರ್ಗದ ಜನಕ್ಕೆ ದೇವರು ಧರ್ಮಗಳ ಬಗ್ಗೆ ಆಚರಣೆ ಮಾಡುವ ಎತ್ತರದ ಮಟ್ಟ. ಕೆಳವರ್ಗದವರಿಗೆ ಅದು ಆಗದೇ ಹೋದಾಗ ಶಕ್ತಿಯಾರಾಧನೆಗಿಳಿದು ಮುಂದೆ ಅದೇ ಭಿಕ್ಷಾಟನೆಯ ಸ್ವರೂಪ ತಾಳಿತು. ತಾವು ನಂಬಿದ್ದ ಶಕ್ತಿ ದೇವತೆಯ ಆರಾಧನೆ ಮಾಡುತ್ತ, ಅವಳ ಮಹಿಮೆಗಳನ್ನು ಗುಣಗಾನ ಮಾಡುತ್ತ ಭಿಕ್ಷಾಟನೆಯನ್ನೇ ವೃತ್ತಿಯನ್ನಾಗಿಸಿಕೊಂಡು ಬದುಕಿದ ಜನರೆ ಈ ದುರಗಮುರಗಿಯರು.

**ದುರಗಮುರಗಿಯರ ಮೂಲ:**

ದುರಗಮುರಗಿಯರು ಎಂದರೆ, ದುರಗಮ್ಮ ಮತ್ತು ಮರಗಮ್ಮನ ಆರಾಧಕರು. ಇಲ್ಲಿ ದುರಗ ಎಂದರೆ ದುರ್ಗಾದೇವಿ, ಮರಗಮ್ಮ ಎಂದರೆ ಪಾರ್ವತಿ ಎಂದು ವಿದ್ವಾಂಸರು ಗುರುತಿಸಿದ್ದಾರೆ. ಇವೆರಡೂ ಪದಗಳ ಅರ್ಥ ಶಕ್ತಿ ದೇವತೆಯಾದ ಪಾರ್ವತಿ ಎಂದೇ ವಿದ್ವಾಂಸರ ಅಭಿಮತವಾಗಿದೆ. ದುರಗಮುರಗಿಯರು ಮೂಲತಃ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದು, ಅನ್ನ, ನೀರು, ಆಶ್ರಯಕ್ಕಾಗಿ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ಅಲೆಯುತ್ತಲೇ ಜೀವನ ಸಾಗಿಸಿದವರು. ಅಲೆಮಾರಿ ಸಮುದಾಯದ ಈ ಜನರ ಆಚಾರ-ವಿಚಾರ, ಆಹಾರ-ವಿಹಾರ, ರೀತಿ ರಿವಾಜುಗಳು ಒಟ್ಟಂದದಲ್ಲಿ ಇವರ ಇರುವಿಕೆಯನ್ನು ನೋಡಿದರೆ ಇವರು ಬಿಲ್ಲುಗೊಂಡ ಜಾತಿಯವರಿಂದ ಬಂದ ದ್ರಾವಿಡ ಜನಾಂಗಕ್ಕೆ ಸೇರಿದವರಾಗಿರಬೇಕು ಎಂಬ ಹೇಳಿಕೆಯೊಂದು ವ್ಯಕ್ತವಾದರೆ, 'ದುರಗ ಮುರಗಿಯರು ಉತ್ತರದಿಂದ ಬಂದವರೆಂದೂ, ದ್ರಾವಿಡ ಗುಂಪಿಗೆ ಸೇರಿದವರೆಂದೂ,' ಚಂದ್ರಶೇಖರ ಕಂಬಾರರು ಅಭಿಪ್ರಾಯ ಪಡುತ್ತಾರೆ.

ಹಾಗೆಯೆ 'ಶಕ್ತಿ ಪೂಜಕರಾದ ದ್ರಾವಿಡ ಗುಂಪಿಗೆ ಸೇರಿದ ದುರಗಮುರಗಿಯರು ದಕ್ಷಿಣದವರೇ ಆಗಿರಬೇಕು' ಎಂದು ಚನ್ನಣ್ಣ ವಾಲಿಕಾರ ಅವರು ಅಭಿಪ್ರಾಯ ಪಡುತ್ತಾರೆ. ದುರಗಮುರಗಿಯರು ದ್ರಾವಿಡ ಗುಂಪಿಗೆ ಸೇರುವ ಇವರು ದಕ್ಷಿಣದವರೇ ಆಗಿರಬಹುದು ಅನ್ನಿಸುತ್ತದೆ. ಆದರೆ ಇವರು ಕುರುಬ ಜನಾಂಗಕ್ಕೆ ಸೇರಿದವರೆಂದೂ ಹೇಳಿಕೆಯಿದೆ. ಇದಕ್ಕೆ ಪೂರಕವಾಗಿ 'ಕುರುಬರಲ್ಲಿ ಎರಡು ವಿಧಗಳಿವೆ. ಒಂದು ಊರ ಕುರುಬರು, ಮತ್ತೊಂದು ಅಡವಿ ಕುರುಬರು. ಅಡವಿ ಕುರುಬರು ಪಶುಪಾಲಕರಾಗಿದ್ದು, ದನಗಳೊಂದಿಗೆ ಕುರಿಗಳನ್ನೂ ಕಾಯಿಸುತ್ತಿದ್ದರು. ಮುಂದೆ ಈ ಸಮುದಾಯದಲ್ಲಿ ಶಾಸ್ತ್ರ ಹೇಳುವವರು, ಕವಲೆತ್ತಿನವರು, ಬಾಳ ಸಂತರು, ದುರಗಮುರಗಿಯರು ಹೀಗೆ ಪಂಗಡಗಳಾಗಿ ಒಡೆದುಕೊಂಡು ಜೀವನೋಪಾಯಕ್ಕೆ ಬೇರೆ ಬೇರೆ ವೃತ್ತಿಗಳನ್ನು ಅವಲಂಬಿಸಿದರೆಂದು ವಿಜಯಪುರ ಜಿಲ್ಲೆಯ ಇಂಡಿ, ಸಿಂದಗಿ, ಮುದ್ದೇಬಿಹಾಳ, ಬಸವನ ಬಾಗೇವಾಡಿ ಕೃಷ್ಣಾ ನದಿತೀರದ ಪರಿಸರದಲ್ಲಿ ವಾಸಿಸುವ ದುರಗಮುರಗಿಯರನ್ನು ಸಂಪರ್ಕಿಸಿದಾಗ ತಿಳಿದುಬಂದ ಮಾಹಿತಿಯಾಗಿದೆ'. (ಕ್ಷೇತ್ರಕಾರ್ಯದಿಂದ ತಿಳಿದುಬಂದ ಮಾಹಿತಿ).

'ಅಲೆಮಾರಿ ಸಮುದಾಯದವರಾದ ದುರಗಮುರಗಿಯರು ಆಂಧ್ರ ಮೂಲದವರಾಗಿದ್ದು, ದ್ರಾವಿಡ ಗುಂಪಿಗೆ ಸೇರಿದವರು. ಆಂಧ್ರಪ್ರದೇಶದ ಮಹಬೂಬನಗರ ಜಿಲ್ಲೆಯ, ಆತ್ಮಕೂರು ತಾಲೂಕಿನ ಗೋಪನಪೇಟೆ ಎಂಬ ಹಳ್ಳಿಯವರು' ಎಂಬುದು ಬಾಗಲಕೋಟೆ ಜಿಲ್ಲೆಯ ಬೀಳಗಿ, ಗಲಗಲಿ ಮತ್ತು ಬಾಗಲಕೋಟೆ ಮತ್ತು ಘಟಪ್ರಭಾ ನದಿ ತೀರಪ್ರದೇಶದಲ್ಲಿ ವಾಸಮಾಡುವ ದುರಗಮುರಗಿಯರು ಅಭಿಮತವಾಗಿದೆ. (ಕ್ಷೇತ್ರಕಾರ್ಯದಿಂದ ತಿಳಿದುಬಂದ ಮಾಹಿತಿಯಾಗಿದೆ. ದುರ್ಗಪ್ಪ 78, ಭೀಮಪ್ಪ 76).

ಉಳಿದಂತೆ ಕರ್ನಾಟಕದಾದ್ಯಂತ ಹಲವು ಜಿಲ್ಲೆಗಳಾದ, ಬೀದರ, ಗುಲಬರ್ಗಾ, ಬಳ್ಳಾರಿ, ರಾಯಚೂರು ಮತ್ತು ಧಾರವಾಡ ಜಿಲ್ಲೆಗಳಲ್ಲಿ ದುರಗಮುರಗಿಯರು ವಾಸಿಸುತ್ತಿದ್ದಾರೆ. ಈ ಜಿಲ್ಲಾ ಕೇಂದ್ರವನ್ನೊಳಗೊಂಡಂತೆ, ತಾಲೂಕು ಮತ್ತು ಹಳ್ಳಿಗಳ ಹೊರವಲಯದಲ್ಲಿ ಅಲ್ಲಲ್ಲಿ ಗುಡಿಸಲುಗಳನ್ನು ಹಾಕಿಕೊಂಡು ಜೀವನ ನಡೆಸುತ್ತಿದ್ದಾರೆ. ಈ ಜನಸಮುದಾಯ ತನ್ನದೇ ಆದ ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಹಿನ್ನೆಲೆಯನ್ನು ಹೊಂದಿದ್ದು, ಒಟ್ಟಾರೆಯಾಗಿ ಕರ್ನಾಟಕದಲ್ಲಿ ಸುಮಾರು ನಲವತ್ತರಿಂದ ನಲವತ್ತೈದು ಸಾವಿರದವರೆಗೆ ಜನಸಂಖ್ಯೆ ಇರಬಹುದೆಂದು ಕ್ಷೇತ್ರಕಾರ್ಯದಿಂದ ತಿಳಿದುಬಂದ ಮಾಹಿತಿಯಾಗಿದೆ.

**ದುರಗಮುರಗಿಯರ ಕಸುಬು:**

ದುರಗಮುರಗಿಯರದು ಅತ್ಯಂತ ಕಲಾತ್ಮಕತೆಯಿಂದ ಕೂಡಿದ ಬದುಕು. ಆದರೆ ಇದಾವುದರ ಅರಿವೂ ಇಲ್ಲದ ದುರಗಮುರಗಿಯರು, ತಲೆತಲಾಂತರದಿಂದಲೂ ತಾವು ನಂಬಿದ್ದ, ತಮ್ಮ ಆರಾಧ್ಯ ದೈವವಾದ ದುರ್ಗಮ್ಮ ಅಥವಾ ಮರ್ಗಮ್ಮನನ್ನು ಹೊತ್ತುಕೊಂಡು ಊರೂರು ತಿರುಗುವುದೇ ಇವರ ಪ್ರಧಾನ ಕಸುಬಾಗಿದೆ. ತಲೆಯ

ಮೇಲೆ ಬುಟ್ಟಿಯಲ್ಲಿ ಅಥವಾ ಪೆಟ್ಟಿಗೆಯಲ್ಲಿ ದೇವಿಯ ಕಟ್ಟಿಗೆಯ ಮೂರ್ತಿಯನ್ನಿಟ್ಟುಕೊಂಡು, ಆಡಿನ ಚರ್ಮದಿಂದ ಮಾಡಿದ ಬುರುಬುರು ವಾದ್ಯವನ್ನು ಬಾರಿಸುತ್ತ ಮನೆಯಿಂದ ಮನೆಗೆ ಹೋಗಿ:

**ದುರ್ಗಮ್ಮ ಬಂದಾಳ್ರೇ ಯೆವ್ವಾ**
**ಮರ್ಗಮ್ಮ ಬಂದಾಳ್ರೇ ಯೆವ್ವಾ**
**ತಾಯಿ ಬಂದಾಳ ರೇ ಯೆವ್ವಾ**
**ತಾಯಿ ಬಂದಾಳ ರೀ.**
**ಬುರುಬುರು ಪೋಚಮ್ಮ ಬಂದಾಳ ರೀ**
...

ಎಂದು ಬುರುಬುರು ವಾದ್ಯ ಬಾರಿಸುತ್ತ ಓಣಿಯೆಲ್ಲ ತಿರುಗಾಡುವ ಆ ಹೆಂಗಸು ಜನರನ್ನು ಕೂಡಿಸುತ್ತಾಳೆ. ಅದೇ ಸಮಯದಲ್ಲಿ ಅವಳ ಗಂಡ, ಪೋತರಾಜನ ವೇಷದಲ್ಲಿದ್ದು, ಕಾಲಿಗೆ ಗೆಜ್ಜೆ ಕಟ್ಟಿಕೊಂಡು ತಲೆಗೂದಲು ಬಿಚ್ಚಿಕೊಂಡು, ಮುಖಕ್ಕೆ ಕುಂಕುಮ ಅರಿಷಿಣ ಹಚ್ಚಿಕೊಂಡು, ನಡುಕ್ಕೆ ಕೆಂಪು ಮತ್ತು ಹಳದಿ ಬಟ್ಟೆ ಕಟ್ಟಿಕೊಂಡು, ಭಯಂಕರ ವೇಷ ತೊಟ್ಟಿರುತ್ತಾನೆ. ಆ ವೇಷದಲ್ಲಿರುವ ಪೋತರಾಜ ಬುರುಬುರು ವಾದ್ಯದ ತಾಳ-ಲಯಕ್ಕೆ ತಕ್ಕಂತೆ ಹೆಜ್ಜೆ ಹಾಕುತ್ತ ರಕ್ತ ಸೋರುವಂತೆ ತನ್ನ ಕೈ ಮತ್ತು ಮೈಗೆ ಲಡ್ಡು ಹೊಡೆದುಕೊಳ್ಳುತ್ತ ಸದ್ದಿನೊಂದಿಗೆ ತೀವ್ರಗತಿಯಲ್ಲಿ ಕುಣಿಯುತ್ತ ಹಾಹಾಹಾಹಾ...... ಎಂದು ಭಯಂಕರವಾಗಿ ಆರ್ಭಟಿಸುತ್ತ ಕುಣಿಯುತ್ತಾನೆ.

ಈ ದುರಗಮುರಗಿಯ ಆಟ ಕೆಲವರಿಗೆ ಭಯ ಮತ್ತು ಭಕ್ತಿಯನ್ನು ಉಂಟುಮಾಡಿದರೆ, ಇನ್ನು ಕೆಲವರಿಗೆ ಮೋಜೆನಿಸುತ್ತದೆ. ಆ ಓಣಿಯ ಹೆಂಗಸರು ತಂಬಿಗೆ ನೀರು, ಮೊರದಲ್ಲಿ ಕಾಳು-ಕಡಿ, ದವಸ-ಧಾನ್ಯ, ಮೆಣಸಿನಕಾಯಿ, ಬಟ್ಟೆ, ಅರಿಷಿಣ, ಕುಂಕುಮ ಮೊದಲಾದ ವಸ್ತುಗಳನ್ನು ತಂದು ಆ ದೇವಿಯ ಮುಂದಿಡುತ್ತಾರೆ. ಪೋತರಾಜ ಕೆಲವೊಮ್ಮೆ ಮುಖಕ್ಕೆ ಅದೇ ದೇವತೆಯ ಮುಖವಾಡ ಧರಿಸಿಕೊಂಡು ಆ ಬುರುಬುರು ವಾದ್ಯದ ಸದ್ದಿಗೆ ತಕ್ಕಂತೆ ವಯ್ಯಾರವಾಗಿ ಕುಣಿಯುತ್ತಾನೆ. ತಲೆಯಮೇಲೆ ಹೊತ್ತುಕೊಂಡ ದೇವತೆ, ಊರಿಗೆ ಬಂದ ರೋಗ-ರುಜಿನ, ಆಪತ್ತುಗಳನ್ನು, ಪೀಡೆ ಸಂಕಟಗಳನ್ನು ಕಳೆದು ಊರನ್ನು ರಕ್ಷಿಸುವಳೆಂಬ ಬಲವಾದ ನಂಬಿಕೆ ಗ್ರಾಮದ ಜನತೆಗಿದೆ. ಆ ಭಯ-ಭಕ್ತಿ ನಮ್ಮ ಹಳ್ಳಿಯ ಜನರಿಗೆ ಗಾಢವಾಗಿದೆ.

ದುರಗಮುರಗಿಯರು ಲಡ್ಡು ಹೊಡೆದುಕೊಂಡು ಮೈ ಕೈಗೆ ರಕ್ತ ಸುರಿಸಿಕೊಳ್ಳುವುದನ್ನು ಕಂಡರೆ ಯಾರೂ ಇವರನ್ನು ಮೈಗಳ್ಳರೆಂದು ಕರೆಯಲು ಸಾಧ್ಯವಿಲ್ಲ. ಹಟವಾದಿಗಳಂತೆ ಇವರು ತಮ್ಮ ದೇಹವನ್ನು ದಂಡಿಸಿಕೊಳ್ಳುತ್ತಾರೆ. 'ಅಲಲಲಲಲ' ಎಂದು ಆವೇಶಭರಿತರಾಗಿ ಕೂಗುತ್ತ, ಕುಣಿಯುತ್ತ, ಆರ್ಭಟಿಸುತ್ತ, ಮೈಮೇಲೆ ಬಂದವರಂತೆ ಮೈಮೇಲೆ ಘಟ್ ಘಟ್ ಎಂದು ಲಡ್ಡು ಹೊಡೆದುಕೊಳ್ಳುತ್ತ, ಕೆಲವೊಮ್ಮೆ ಉನ್ಮಾದಿತರಾಗಿ ಲಡ್ಡನ್ನು ನೆಲಕ್ಕೊತ್ತಿ ಚಿಮ್ಮಿಸಿ ಠೊಳ್ಳ್ ಠೊಳ್ಳ್ ಎಂದು ಝಾಡಿಸಿ ಬಡಿದುಕೊಳ್ಳುತ್ತಿರುತ್ತಾರೆ. ಇದನ್ನು ಕಂಡರೆ ಇವರು ಖಂಡಿತವಾಗಿಯೂ

ಶೂರರೆಂದೇ ಹೇಳಬೇಕು. ಈ ಎಲ್ಲ ಆಟವನ್ನು ನೆರೆದ ಜನ ಮೂಕ ವಿಸ್ಮಿತರಾಗಿ ನೋಡುತ್ತಾರೆ. ದೇವಿಗೆ ಶರಣಾದ ಜನ ಸಕಲ ರೋಗಗಳ ಒಡತಿಯಾದ ಮಾರಮ್ಮನಿಗೆ ಮೊರೆ ಹೋಗುತ್ತಾರೆ.

ಕುಂಕುಮ – ಅರಿಷಿಣ ತೊಡೆದ ಪೋತರಾಜನ ಮೈ ಕೈಗಳ ಮೇಲೆ ರಕ್ತದ ಧಾರೆಗಳು ಕೆಂಪಗೆ ಹರಿಯುತ್ತಿದ್ದರೆ ನೋಡುವವರ ಕಣ್ಣುಗಳಲ್ಲಿ ಭಯ ಮತ್ತು ದುಃಖವನ್ನುಂಟುಮಾಡುತ್ತದೆ. ಇಂತಹ ಕ್ರೌರ್ಯವನ್ನು ನೋಡಲಾಗದೆ ಕೆಲವರು ಸಾಕು ನಿಲ್ಲಿಸೆಂದು ಹೇಳಿ ಕೊಡಬೇಕಾದ ದಕ್ಷಿಣೆಯನ್ನು ಕೊಟ್ಟು ಕಳಿಸುತ್ತಾರೆ. ಆ ಪೋತರಾಜನಿಗೆ ಮಾತ್ರ ಯಾರ ಯಾವ ಭಾವನೆಗಳ ಪರಿವೆಯೇ ಇಲ್ಲದೆ ರಕ್ತ ಹರಿಯುತ್ತಿರುವ ಮೈಯಿಂದಲೇ ಬಗ್ಗಿ ಬಗ್ಗಿ ನಮಸ್ಕರಿಸುತ್ತಲೇ ಹೋಗುತ್ತಾ ಹಣ ಸಂಗ್ರಹಿಸುತ್ತಾನೆ. ಹೀಗೆ ಭಯಂಕರವಾಗಿ ದೇಹ ದಂಡಿಸುವ ಈ ದುರಗಮುರಗಿಯರಿಗೆ ಬೇರೆ ಪರಿಶ್ರಮಪಡುವ ಉದ್ಯೋಗವಿರಲಿಲ್ಲವೆಂದೇ ತೋರುತ್ತದೆ. ಈ ಜನಸಮುದಾಯದವರು ಬೇರೆ ಯಾವ ಉದ್ಯೋಗವನ್ನು ಕೈಗೊಂಡಂತೆ ನಮಗೆ ತಿಳಿದುಬರುವುದಿಲ್ಲ.

**ತಾಯಿ ಬಂದಾಳೆವ್ವಾ**<br>**ಮರಗಮ್ಮ ಬಂದಾಳೆವ್ವಾ**<br>**ಕಿಣಗಿ ಮರಗಮ್ಮ, ಕುವಟಗಿ ಮರಗಮ್ಮ**<br>**ದುರಗಮ್ಮ ಬಂದಾಳೇ ಎವ್ವಾ ...**

ಎಂದು ಆರ್ಭಟಿಸುತ್ತ ಕುಣಿಯುತ್ತ ಲಡ್ಡು ಹೊಡೆದುಕೊಳ್ಳುತ್ತ ಹತ್ತಿರ ಬಂದರೆ ಸಾಕು, ನೋಡುತ್ತ ನಿಂತಿರುವ ಮಕ್ಕಳ ಆದಿಯಾಗಿ ವಯಸ್ಕರೂ ಹೆದರಬೇಕು. ಅದರಲ್ಲೂ ಒಮ್ಮೊಮ್ಮೆ ಬಸುರಿ ಹೆಣ್ಣುಮಕ್ಕಳ ಗರ್ಭಪಾತವಾಗುತ್ತಿತ್ತಂತೆ, ಅಂತಹ ಭಯಂಕರವಾದ ಮುಖವಾಡ ಧರಿಸಿದ ನರ್ತನ ಈ ಪೋತರಾಜನದು.

ಪೋತರಾಜ ತಾಯಿ ಮರಗಮ್ಮನ ಹೆಸರು ಹೇಳಿ ಕೂಗುತ್ತ ನಿಂತಾಗ ಓಣಿಯ ಎಲ್ಲ ಹೆಂಗಸರು ನೀಡಲು ಜೋಳ ಇತ್ಯಾದಿ ವಸ್ತುಗಳನ್ನು ತಂದರೆ ಜೋಳಿಗೆಯಲ್ಲಿ ನೀಡಿಸಿಕೊಂಡು ತನ್ನ ಮೂರು ಬೆರಳಿಗೆ ಬರುವಷ್ಟು ಜೋಳವನ್ನೆತ್ತಿ ನೀಡಿದವರ ಮೊರದಲ್ಲಿ ಹಾಕುತ್ತಾನೆ. ಜೊತೆಗೆ ತನ್ನ ಟೊಂಕಕ್ಕೆ ಸುತ್ತಿಕೊಂಡಿರುವ ಜೇಬಿನಂತಹ ಚೀಲದಿಂದ ಅರಿಷಿಣ ಮತ್ತು ಬೇವಿನ ತೊಪ್ಪಲನ್ನು ತಾಯಿತ ಪ್ರಸಾದವೆಂದು ಮೊರದಲ್ಲಿ ಹಾಕುತ್ತಾನೆ. ನೀಡಲುಬಂದ ಎಲ್ಲ ಹೆಂಗಸರು ಅದನ್ನು ಸ್ವೀಕರಿಸಿ ಪವಿತ್ರವೆಂದು ತಿಳಿದು ಮನೆಯಲ್ಲಿ ಒಯ್ದು ಜೋಳದ ಚೀಲದಲ್ಲಿ ಹಾಕುತ್ತಾರೆ. ಇದರಿಂದ ತಾಯಿಯ ಆಶೀರ್ವಾದದಿಂದ ದವಸ ಧಾನ್ಯ ಸಂಪತ್ತು ಹೆಚ್ಚುತ್ತದೆ ಎಂಬ ನಂಬಿಕೆ ನಮ್ಮ ಹಳ್ಳಿಯ ಜನರಲ್ಲಿ ಗಾಢವಾಗಿದೆ. ಅಷ್ಟೇ ಅಲ್ಲದೆ ನಮ್ಮ ರಾಸುಗಳಿಗೆ ತಗುಲುವ ರೋಗರುಜಿನಗಳು ದೂರವಾಗುತ್ತವೆ ಎಂಬ ನಂಬಿಕೆಯೂ ನಮ್ಮ ಜನರಲ್ಲಿದೆ. ಬಂದಷ್ಟು ಭಿಕ್ಷೆಯನ್ನು ಪಡೆದು ಮುಂದಿನ ಓಣಿಗೆ ಹೋಗುತ್ತಾರೆ.

**ದುರಗಮುರಗಿಯರಿಗೆ ಕಸುಬಿನ ಬಗೆಗೆ ನಂಬಿಕೆ:**

ಮೂಲತಃ ಶಕ್ತಿಯ ಪೂಜಕರಾದ ದುರಗಮುರಗಿಯರಿಗೆ ತಮ್ಮ ಕಸುಬಿನ ಬಗೆಗೆ ಅಪಾರವಾದ ನಂಬಿಕೆ ಮತ್ತು ಶ್ರದ್ಧೆಯಿದೆ. ಈಗಾಗಲೇ ಹೇಳಿದಂತೆ 'ನಮಗೆ ಇಬ್ಬರು ತಾಯಂದಿರು ದುರ್ಗಮ್ಮ ಮತ್ತು ಮರ್ಗಮ್ಮ. ಅವರ ಸೇವೆ ಮಾಡಕೊಂಡೇ ಬದುಕಬೇಕಂತ ಕೆಲಸ ಒಪ್ಪಿಸಿದ್ದಾರೆ. ದಿನಾಲೂ ಊರಾಡಿ ಈ ಅವ್ವಂದಿರ ಗುಡಿ ಹೊತ್ತು ಬುರುಬುರು ವಾದ್ಯ ಬಾರಿಸುತ್ತ ಪೋತರಾಜನಾಗಿ ಕುಣಿಯುತ್ತಲೇ ಭಿಕ್ಷೆ ಬೇಡಿಕೊಂಡೆ ನಾವು ಬದುಕಬೇಕೆಂದು ಅವ್ವ ಹೇಳಿದ್ದಾಳೆ. ಈ ಕೆಲಸ ಬಿಟ್ಟರೆ ನಾವು ರಕ್ತ ಕಾರಿ ಸಾಯುತ್ತೇವೆ. ನಮ್ಮ ವಂಶ ನಿರ್ವಂಶ ಆಗುತ್ತದೆ. ನಮ್ಮ ಕುಲ ಅಳಿದು ಹೋಗುತ್ತದೆ,' ಎಂಬುದು ದುರಗಮುರಗಿಯರ ಬಲವಾದ ನಂಬಿಕೆಯಾಗಿದೆ.

ಆದುದರಿಂದ ವಿಶೇಷ ದೇವಿಯ ವಾರಗಳಾದ ಮಂಗಳವಾರ ಮತ್ತು ಶುಕ್ರವಾರಗಳು ಇವರಿಗೆ ಅತ್ಯಂತ ಶುಭದಿನಗಳು. ಯಾವ ಕಾರ್ಯವನ್ನು ಮಾಡಲು ಯೋಗ್ಯ ಎಂಬುದು ಇವರ ನಂಬಿಕೆ. ಇವರ ಎಲ್ಲ ಶುಭಕಾರ್ಯಗಳನ್ನು ಈ ದಿನಗಳಂದೇ ನಡೆಸುತ್ತಾರೆ. ಇವರು ಊರಲ್ಲಿ ದುರ್ಗಮ್ಮನ ಗುಡಿ ಹೊತ್ತು ಆಡುವುದೂ ಕೂಡಾ ಈ ಎರಡು ದಿನಗಳಲ್ಲಿಯೇ.

ಸಾಂಪ್ರದಾಯಿಕವಾಗಿ ನಂಬಿಕೆಗಳು ಎಲ್ಲರಿಗೂ ಇರುವಂತೆ, ಇವರಿಗೂ ಇವೆ. ಉಳಿದವರು ಇವುಗಳನ್ನು ಪಾಲಿಸುತ್ತಾರೆಯೋ ಇಲ್ಲವೋ ಗೊತ್ತಿಲ್ಲ, ಆದರೆ ದುರಗಮುರಗಿಯರಂತೂ ಇವುಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಾರೆ. ಇವರಿಗೆ ಬೆಕ್ಕು ಅಡ್ಡ ಬಂದರೆ, ತಲೆ ಬೋಳಿಸಿಕೊಂಡ ವಿಧವೆಯರನ್ನು ಕಂಡರೆ, ಯಾರಾದರೂ ಸೀನಿದರೆ, ಹಲ್ಲಿ ಲೊಚಗುಟ್ಟಿದರೆ, ಎದುರಿಗೆ ಖಾಲಿ ಕೊಡ ಬಂದರೆ, ಕ್ಷೌರಿಕ ಎದುರಾದರೆ ತಕ್ಷಣವೇ ಒಂದು ನಿಮಿಷ ಅದೇ ಜಾಗದಲ್ಲಿ ಕುಳಿತು ಮುಂದೆ ಹೋಗುತ್ತಾರೆ. ಇವುಗಳನ್ನು ತಮ್ಮ ಬದುಕಿನ ಭಾಗವಾಗಿಯೇ ಇರಿಸಿಕೊಂಡು ಬಂದ ದುರಗಮುರಗಿಯರಿಗೆ ಇವುಗಳನ್ನು ಬಿಟ್ಟು ಬಾಳುವುದು ಸಾಧ್ಯವಿಲ್ಲ ಎಂದೆ ಹೇಳಬಹುದು.

ಜ್ವರ ಬಂದರೆ ಮೈಮೇಲೆ ಗಾಳೆಮ್ಮ ಬಂದಾಳೆಂದು ನಂಬುತ್ತಾರೆ. ದುರ್ಗಮ್ಮ ಮತ್ತು ಮರಗಮ್ಮನನ್ನು ಪೂಜಿಸಿ ಹರಕೆಕಟ್ಟಿ ರೋಗ ನಿವಾರಣೆಯಾಗಲೆಂದು ಬೇಡಿಕೊಳ್ಳುತ್ತಾರೆ. ಮಕ್ಕಳು ಕಾಯಿಲೆಯಿಂದ ಹಾಸಿಗೆ ಹಿಡಿದರೆ ದೇವಿ ಕೆಟ್ಟಕಣ್ಣು ಬಿಟ್ಟಿದ್ದಾಳೆಂದು ತಿಳಿದು ಆಕೆಗೆ ಭಕ್ತಿ ಭಾವದಿಂದ ಮುಡಿಪು ಕಟ್ಟಿಡುತ್ತಾರೆ. ಹೀಗೆ ಮಾಡಿದರೆ ಹಾಸಿಗೆ ಹಿಡಿದ ಮಕ್ಕಳು ಬಹುಬೇಗ ಗುಣಮುಖರಾಗುತ್ತಾರೆಂದು ಬಲವಾದ ನಂಬಿಕೆ ಈ ದುರಗಮುರಗಿಯರಿಗಿದೆ. ಒಟ್ಟಾರೆಯಾಗಿ ಕಷ್ಟದಲ್ಲಿದ್ದಾಗ ದೇವಿ ನಮ್ಮ ಕೈ ಬಿಡುವುದಿಲ್ಲವೆಂದು ನಂಬಿದ ಇವರು ಹೊಟ್ಟೆಗೆ ಹಿಟ್ಟಿಲ್ಲದಿದ್ದರೂ ಈ ದೇವಿಯರನ್ನು ಪೂಜಿಸಿ ಕುರಿ, ಕೋಳಿ ಕೊಯ್ದು ನೈವೇದ್ಯ ಕೊಡುತ್ತಾರೆ. ಮೃತ್ಯುದೇವತೆಯಾದ ಈ ಇಬ್ಬರು ದೇವಿಯರ ಮೇಲೆ ನಮ್ಮ ಜನರ ನಂಬಿಕೆಯೂ ಕೂಡಾ ಗಾಢವಾಗಿದೆ. ಕೆಲವು ವೇಳೆ ದುರಗಮುರಗಿಯರು ಊರಲ್ಲಿ ಬರುವುದನ್ನೇ

ಕಾಯುತ್ತಿರುವ ಸಂದರ್ಭಗಳೂ ಉಂಟು. ಅವರು ಬಂದೊಡನೆ ಆ ತಾಯಿಗೆ ಅರ್ಪಿಸುವ ಕಾಣಿಕೆಯನ್ನು ಅರ್ಪಿಸಿ ಜನರು ಕೃತಾರ್ಥರಾಗುತ್ತಾರೆ.

**ದುರಗಮುರಗಿಯರ ಬದುಕು: ಆಧುನಿಕತೆಯ ಪ್ರಭಾವ**

ಜಗತ್ತಿನಲ್ಲಿ ಯಾವುದನ್ನೂ ಬಿಡದೆ ಎಲ್ಲ ಕ್ಷೇತ್ರಗಳನ್ನು ಆವರಿಸಿಕೊಂಡಿದ್ದ ಈ ಆಧುನಿಕತೆಯ ಬಿರುಗಾಳಿ ದುರಗಮುರಗಿಯರ ಸಾಂಸ್ಕೃತಿಕ ಬದುಕಿಗೂ ಲಗ್ಗೆಯಿಟ್ಟಿದೆ. ಆದರೆ ಶತಮಾನಗಳಿಂದಲೂ ಹಳ್ಳಿಗಾಡಿನೊಂದಿಗೆ ಅತ್ಯಂತ ಅವಿನಾಭಾವ ಸಂಬಂಧ ಹೊಂದಿದ್ದ ದುರಗಮುರಗಿಯರು ಮಾತ್ರ ಇದರಿಂದ ಧೃತಿಗೆಟ್ಟಿಲ್ಲ. ಸಾಂಪ್ರದಾಯಿಕವಾಗಿ ಈ ವೃತ್ತಿಯನ್ನು ಆಚರಿಸಿಕೊಂಡು ಬಂದ ದುರಗಮುರಗಿಯರು ಈ ಪರಂಪರೆಯನ್ನು ಮುಂದುವರೆಸಿಕೊಂಡೇ ಹೊಗುತ್ತಿದ್ದಾರೆ. 'ಎಪ್ಪಾ ನಾವು ಎಲ್ಲಾ ಆಕೆಯ ಉಡಿಯಗ ಹಾಕೆವರಿ, ಅಕಿ ಏನ ಮಾಡಬೇಕು ಅದನ್ನ ಮಾಡತಾಳರಿ. ಜಗತ್ತಿನ್ಯಾಗ ಏನಾಗತದೋ ಆಗಲಿ, ನಾವು ಮಾತ್ರ ನಮ್ಮ ಕಾಯಕ ಮಾಡತೇವರಿ' ಎಂದು ಪೋತರಾಜ ಹನುಮಜ್ಜ ಹೇಳುವ ಮಾತು.

ದುರಗಮುರಗಿಯರು ತಮ್ಮ ಕಸುಬು, ನಂಬಿಕೆ ಮತ್ತು ಆಚರಣೆಗಳಿಗೆ ಧಕ್ಕೆ ಬಾರದಂತೆ ಅವುಗಳನ್ನು ಕಾಪಿಟ್ಟುಕೊಂಡು ಬಂದಿದ್ದಾರೆ. ಮೂಲ ವೃತ್ತಿಯನ್ನು ಬಿಟ್ಟು ಬದುಕಲು ಇವರಿಗೆ ಸಾಧ್ಯವಿಲ್ಲ. ಆಧುನಿಕತೆಗೆ ಹೊಂದಿಕೊಳ್ಳಲು ಇವರು ಸಿದ್ಧರಿಲ್ಲ. ಮಾನಸಿಕ ಸ್ಥಿರತೆಯಿಲ್ಲದ ಮುಗ್ಧ ಜನರಿವರು. ಜಿಡ್ಡುಗಟ್ಟಿರುವ ರೂಢಿ ಸಂಪ್ರದಾಯಗಳ ಬೆಸುಗೆ ಈ ಜನರಿಗಿದೆ. ಎಲ್ಲಕ್ಕೂ ಮೇಲಾಗಿ ವಿದ್ಯೆಯ ಕೊರತೆಯಿದೆ ಎಂದು ಆಧುನಿಕತೆ ಪ್ರತಿಪಾದಿಸುತ್ತಿದೆ.

ಕಾಲ ಎಲ್ಲವನ್ನೂ ತನ್ನಲ್ಲಿ ಲೀನ ಮಾಡಿಕೊಳ್ಳುವಂತೆ, ದುರಗಮುರಗಿಯರ ಬದುಕೂ ಕೂಡಾ ಕಾಲನ ಲೀಲೆಯಲ್ಲಿ ಲೀನವಾಯಿತು. ಒಂದು ಕಾಲದಲ್ಲಿ ಇವರ ಕಲೆಯ ಮೂಲ ಉದ್ದೇಶ ದೇವಿಯ ಆರಾಧನೆಯಾಗಿತ್ತು. ಅಂದು ಇವರ ಹೊಟ್ಟೆ ಬಟ್ಟೆಯ ಹೊಣೆ ಊರಿನ ಸಮಾಜದ ಜನರದ್ದಾಗಿತ್ತು. ಕಾಲಘಟ್ಟದಿಂದ ಹೀಗೆ ನಡೆದುಕೊಂಡು ಬಂದಿತ್ತು. ಆದರೆ ಯಾವಾಗ ಜನ ಬದಲಾವಣೆಯನ್ನು ಬಯಸಿ ಹೊರಟರೋ ಅಂದಿನಿಂದ ದುರಗಮುರಗಿಯರ ಜೀವನ ವಿಧಾನವೂ ಅನಿವಾರ್ಯವಾಗಿ ಬದಲಾಯಿತು. ಪರಿಸ್ಥಿತಿಯೊಂದಿಗೆ ರಾಜಿಮಾಡಿಕೊಳ್ಳುವುದು ಇವರಿಗೆ ಅನಿವಾರ್ಯವಾಯಿತು. ಒಂದು ಕಾಲಕ್ಕೆ ತಮ್ಮ ಸಂಸ್ಕೃತಿಯನ್ನು ಅಪ್ಪಿಕೊಂಡು ಯಾವಾಗಲೂ ಅದಕ್ಕೆ ತಲೆಬಾಗಿಕೊಂಡೇ ಬದುಕುತ್ತ ಬಂದ ಇವರು, ಇಂದು ವ್ಯವಸ್ಥೆ ಬದಲಾಗಿದೆ. ಬದಲಾದ ವ್ಯವಸ್ಥೆಯನ್ನು ಇಂದು ಅನಿವಾರ್ಯವಾಗಿ ಒಪ್ಪಿಕೊಳ್ಳಬೇಕಿದೆ. ಅಂದು ದೇವಿಗೆ ಮೀಸಲಾಗಿದ್ದ ಇವರ ಕಲೆ ಇಂದು ಹೊಟ್ಟೆಯ ಪೂಜೆಯಾಗಿದೆ.

ಆಧುನಿಕ ಜಗತ್ತಿನ ಜನ ದುರಗಮುರಗಿಯರ ಕಲೆಗಳನ್ನು ಕಡೆಗಣಿಸಿದಾಗ ಈ ಸಮುದಾಯ ಹೊಟ್ಟೆ ತುಂಬಿಸಲು ಈ ಕಲೆಗಳು ಅಸಮರ್ಥವಾದವು.

ಇದರಿಂದಾಗಿ ಪೋತರಾಜ ಭ್ರಾಂತಿಗೊಂಡಿದ್ದಾನೆ. ಬದುಕಲು ಹೋರಾಟ ಮಾಡಲೇಬೇಕು. ಇದೂ ಒಂದು ರೀತಿಯ ಹೋರಾಟವೇ. ಈ ಸವಾಲನ್ನು ಸ್ವೀಕರಿಸಿಯೇ ಮೇಲೆದ್ದು ನಿಂತ ಪೋತರಾಜ, ಈ ಪ್ರದರ್ಶನ ಕಲೆಗಳು ಹೊಟ್ಟೆ ತುಂಬಿಸುವುದಿಲ್ಲ ಎನ್ನುವ ಸತ್ಯ ಅವನಿಗೆ ಗೊತ್ತಾಯಿತು. ಮನುಷ್ಯ ಮಾಡುವುದೆಲ್ಲವೂ ಹೊಟ್ಟೆಗಾಗಿಯೇ ಅಲ್ಲವೇ? ಈಗ ಈ ಕಲೆ ಹೊಟ್ಟೆ ತುಂಬಿಸಲು ಸೋಲುತ್ತಿದೆ ಎಂಬ ಸತ್ಯ ಗೊತ್ತಾದಾಗ ಅವನ ದಾರಿ ಬೇರೆ ಕಡೆ ನಡೆದಿದೆ. ಕಾರ್ಖಾನೆಗಳಲ್ಲಿ, ಕೂಲಿ ಹಮಾಲಿ ಕೆಲಸದಲ್ಲಿ, ಹೋಟೆಲ್ಲುಗಳಲ್ಲಿ, ಸಣ್ಣಪುಟ್ಟ ವ್ಯಾಪಾರಗಳಲ್ಲಿ, ಕಟ್ಟಡ ಕಾರ್ಮಿಕನಾಗಿ ಹೀಗೆ ಹಲವಾರು ಕಡೆಗಳಲ್ಲಿ ತನ್ನ ಬದುಕು ರೂಪಿಸಿಕೊಳ್ಳುತ್ತಿದ್ದಾನೆ. ಆದರೆ ನಮ್ಮ ನಾಡಿನ ಅಮೂಲ್ಯವಾದ ಸಾಂಸ್ಕೃತಿಕ ಸಂಪತ್ತಿನ ಬದುಕೊಂದು ನೇಪಥ್ಯಕ್ಕೆ ಸರಿದಿರುವುದು ಮಾತ್ರ ಅತ್ಯಂತ ವಿಷಾದದ ಸಂಗತಿ.

**ಪರಾಮರ್ಶನ ಗ್ರಂಥಗಳು:**


1. ತಿಪ್ಪೇರುದ್ರಸ್ವಾಮಿ ಎಚ್., (2003), ಕರ್ನಾಟಕ ಸಂಸ್ಕೃತಿ ಸಮೀಕ್ಷೆ, ಮೈಸೂರು: ಡಿ.ವಿ.ಕೆ. ಮೂರ್ತಿ ಪ್ರಕಾಶನ.
2. ಗೀತಾ ನಾಗಭೂಷಣ (ಸಂ), (1993), ದುರಗಮುರಗಿಯರ ಸಂಸ್ಕೃತಿ, ಬೆಂಗಳೂರು: ಕರ್ನಾಟಕ ಸಾಹಿತ್ಯ ಅಕಾಡೆಮಿ.
3. ವಿವಿಧ ಲೇಖಕರು, (2011), ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ (ಸಂಪುಟ 1 ರಿಂದ 10), ಬೆಂಗಳೂರು: ಸ್ವಪ್ನ ಬುಕ್ ಹೌಸ್.
4. ಕೆಂಗಲಗುತ್ತಿ ಎಸ್.ಡಿ., (2019), ದೇಸೀ ಎಂಬ ಬೆಡಗು, ಬೆಂಗಳೂರು: ಚೇತನ ಪಬ್ಲಿಕೇಶನ್.
5. ಕ್ಷೇತ್ರಕಾರ್ಯ, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯ ಹಲವು ಪರಿಸರಗಳು.